**ದಿನಾಂಕ 17.12.2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು : ಶ್ರೀ ಎಸ್.ಎನ್. ಆರ್. ವಾದಿ ಪರ ವಕೀಲರಿಂದ**

ಸರ್ವೇ ನಂಬರ್ 117ರ ಸಂಬಂಧ ವಾದಿಯು ದಾವೆ ಸಲ್ಲಿಸಿದ್ದಾರೆ. ದಾವಾ ಸ್ವತ್ತಿನ ಪಶ್ಚಿಮದ ಕಡೆ ಇರುವ ಸರ್ವೇ ನಂಬರ್ 114/1ರ ಸ್ವತ್ತು ನನಗೆ ಪೂರ್ವಿಕರಿಂದ ಬಂದಿದೆ. ನಮ್ಮ ಪೂರ್ವಿಕರು ಸರ್ವೇ ನಂಬರ್ 114/1ರ ಸ್ವತ್ತಿಗೆ ಕಂದಾಯ ಪಾವತಿಸುತ್ತಾ ಸಾಗುವಳಿ ಹೊಂದಿದ್ದರು. ಅವರಿಗೆ ಆ ಸ್ವತ್ತು ಹೇಗೆ ಬಂದಿದೆ ಗೊತ್ತಿಲ್ಲ.

ಸರ್ವೇ ನಂಬರ್ 117ರ ಒಟ್ಟು ವಿಸ್ತೀರ್ಣ 3 ಎಕರೆ 27 ಗುಂಟೆ ಪೋಡಿಯಾಗಿರುವುದು ಗೊತ್ತಿಲ್ಲ. ನಾನು ನೋಡಿದ ಪ್ರಕಾರ ಪ್ರತಿವಾದಿಗಳು ಮತ್ತು ಅವರ ಪೂರ್ವಜರು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದರು. ದಾವಾ ಸ್ವತ್ತನ್ನು ನಮ್ಮ ಮುಂದೆ ಸರ್ವೇ ಮಾಡಿಲ್ಲ. 2 ನೇ ಪ್ರತಿವಾದಿ ಮತ್ತು 3 ನೇ ಪ್ರತಿವಾದಿ ತಮ್ಮ ಸ್ವತ್ತನ್ನು ಸರ್ವೇ ಮಾಡಿಸಿರುವ ಬಗ್ಗೆ ಗೊತ್ತಿಲ್ಲ. ದಾವಾ ಸ್ವತ್ತಿನ ದಾಖಲೆಗಳನ್ನು ನೋಡಿಲ್ಲ. ದಾವಾ ಸ್ವತ್ತಿನ ವಿಸ್ತೀರ್ಣ 3 ಎಕರೆ 27 ಗುಂಟೆ ಇದ್ದು, ಅದರಲ್ಲಿ 4 ಜನರಿಗೆ ಭಾಗಾಂಶ ಇದೆ ಎಂದರೆ ಸರಿಯಲ್ಲ.

ಸರ್ವೇ ನಂಬರ್ 117ರಲ್ಲಿ ಒಟ್ಟು ವಿಸ್ತೀರ್ಣದ ಪೈಕಿ ವಾದಿಗಳ ಮಾರಾಟಗಾರರಿಗೆ 37 ಗುಂಟೆ ಸ್ವತ್ತಿನಲ್ಲಿ ಹಕ್ಕಿದೆ ಎಂದರೆ ಸರಿಯಲ್ಲ. ವಾದಿಗಳ ಮಾರಾಟಗಾರರು ತಮ್ಮ ಪೂರ್ವಜರ ಕಾಲದಿಂದಲೂ ಸದರಿ ಸ್ವತ್ತಿನಲ್ಲಿ ಸ್ವಾಧೀನ ಹೊಂದಿದ್ದರು ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ, ವಿಸ್ತೀರ್ಣ 37 ಗುಂಟೆ ಸ್ವತ್ತಿನ ಸಂಬಂಧ ಸರ್ಕಾರದವರು ಖಾತೆ ಮಾಡಿದ್ದರು ಎಂದರೆ ಸರಿಯಲ್ಲ. ಆದೇ ರೀತಿ ದಿನಾಂಕ 17.04.2003ರಂದು ವೆಂಕಟನರಸಿಂಹ ಭಟ್ಟಾಚಾರ್ ರವರು ವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಅಂದಿನಿಂದ ವಾದಿಯು ದಾವಾ ಸ್ವತ್ತಿನಲ್ಲಿ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ.

ಅಸಲು ದಾವಾ ಸಂಖ್ಯೆ213/2016
ಡಿ.ಡಬ್ಲ್ಯು:3

ವಾದಿಯ ಮಗ ಹರೀಶ್ ರೆಡ್ಡಿರವರನ್ನು ನೋಡಿದ್ದೇನೆ. ಸದರಿ ಹರೀಶ್ ರೆಡ್ಡಿ ನನ್ನ ಮೇಲೆ ಇದೇ ನ್ಯಾಯಾಲಯದದಲ್ಲಿ ಸಿವಿಲ್ ವ್ಯಾಜ್ಯ ಹೂಡಿದ್ದಾರೆ ಎಂದರೆ ಸರಿ. ಹಾಗಾಗಿ ನಾನು ಪ್ರತಿವಾದಿಗಳ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಸ್ವಾಧೀನ ಹೊಂದಿಲ್ಲದೇ ಇದ್ದರೂ ಸಹ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2003 ರಿಂದ ವಾದಿಯೇ ದಾವಾ ಸ್ವತ್ತಿನಲ್ಲಿ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ಪೂರ್ವಕ್ಕೆ-ಚಾವಡಿ ಎನಕ ಶಂಕರಪ್ಪ, ಪಶ್ಚಿಮಕ್ಕೆ –ಗುನ್ನ ಈಶ್ವರಪ್ಪ, ಉತ್ತರಕ್ಕೆ – ರಾಮಾಂಜನೇಯ ರೆಡ್ಡಿ ಮತ್ತು ದಕ್ಷಿಣಕ್ಕೆ –ಗ್ರಾಮ ಠಾಣಾ ಈ ಚೆಕ್ಕುಬಂದಿಯಲ್ಲಿ ವಾದಿ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.